**೪. ಸಾರ್ವಜನಿಕ ಪ್ರಾಧಿಕಾರದ ಕಾರ್ಯಗಳ ನಿರ್ವಹಣೆಯಲ್ಲಿ ಅನುಸರಿಸುವ ವಿಧಾನ (ರೂಪಿಸುವ ಸೂತ್ರಗಳು):**

**ಕಲಂ ೪ (೧) (ಬಿ) ((IV)**

೧. ಕನ್ನಡ ಸಾಹಿತ್ಯ ಪರಿಷತ್ತಿನ ನಿಯಮ ನಿಬಂದನೆಗಳಲ್ಲಿನ ನಿಯಮ (೩೫) ರನ್ವಯ ಮಾಹಿತಿ ಹಕ್ಕು ಅಧಿನಿಯಮ ೨೦೦೫ ಅನ್ವಯವಾಗುತ್ತದೆ.

"ಪರಿಷತ್ತಿನ ಕಾರ್ಯಚಟುವಟಿಕೆಗಳ ಬಗ್ಗೆ ವಿವರಣೆಯನ್ನು ಪರಿಷತ್ತಿನ ಸದಸ್ಯರು ಮಾಹಿತಿ ಹಕ್ಕು ಅಧಿನಿಯಮದ ಅಡಿಯಲ್ಲಿ ಪಡೆಯಬಹುದು. ಸಾರ್ವಜನಿಕ ಮಾಹಿತಿ ಅಧಿಕಾರಿ, ಮೇಲ್ಮನವಿಯ ಪ್ರಾಧಿಕಾರವನ್ನು ಔಚಿತ್ಯಕ್ಕೆ ಅನುಗುಣವಾಗಿ, ಮಾಹಿತಿ ಹಕ್ಕು ಅಧಿನಿಯಮ ೨೦೦೫ರ ಅಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸುವ ಅಧಿಕಾರವನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರು ಹೊಂದಿರತಕ್ಕದ್ದು."

೨. ಶ್ರೀ ಕೃಷ್ಣರಾಜ ಪರಿಷತ್ತಿನಮಂದಿರ/ಅಕ್ಕಮಹಾದೇವಿ/ಕುವೆಂಪು ಸಭಾಂಗಣ ಇವುಗಳಲ್ಲಿ ಕಾರ್ಯಕ್ರಮ ನಡೆಸಲು ಸಭಾ ಮಂಟಪದ ಅಪೇಕ್ಷಾ ಪತ್ರದೊಂದಿಗೆ ಕಾಯ್ದಿರಿಸಲು ಭರ್ತಿ ಮಾಡಿದ ಸಭಾಮಂಟಪದ ಅಪೇಕ್ಷಾ ಪತ್ರದೊಂದಿಗೆ ಕೇಂದ್ರ ಪರಿಷತ್ತು ಹೊರಡಿಸಿರುವ "ಸಭಾ ಮಂಟಪದ ನಿಯಮಗಳು" ಅನ್ವಯ ಸಲ್ಲಿಸುವುದು. ಇದರ ಬಗ್ಗೆ ಅಂತಿಮವಾಗಿ ತೀರ್ಮಾನ ಕೈಗೊಳ್ಳುವ ಅಧಿಕಾರ ಅಧ್ಯಕ್ಷರಿಗಿರುತ್ತದೆ.